ಶ್ರೀ ಬಿ. ಎಸ್. ಶೋರಣ್ಣಗೌಡ.—ಈ ಜಮೀನು ಗೋಮಾಳವೋ ಅಥವಾ ಆಕಾರ ಬಂಜರೋ ಎಂದು ತಿಳಿಸುತ್ತೀರಾ ?

ಶ್ರೀ ಎಂ. ಪಿ. ಪಾಟೀಲ್.—ಅದು ಗೋಮಾಳವಲ್ಲ. ಆದರೆ ಅಲ್ಲಿ ನೀರಿನ ಕಾಲುವೆಗಳು ಹೋಗುತ್ತವೆ ಯಾದುದರಿಂದ ಆ ಭೂಮಿಯನ್ನು ಕೊಡಬಾರದೆಂದು ಖಾತೆಯ ಪುಸ್ತಕದಲ್ಲಿ ಷರಾ ಇದೆ. ಆದುದರಿಂದ ಈ ಭೂಮಿಯನ್ನು ಯಾರಿಗೂ ಕೊಟ್ಟಿಲ್ಲ.

ಶ್ರೀ ಬಿ. ಎಸ್. ಶೋರಣ್ಣಗೌಡ.—ಈ ಜಮೀನಿನ ಆಕಾರ ಮತ್ತು ವಿಸ್ತೀರ್ಣವೆಷ್ಟು ಎಂಬುದನ್ನು ಹೇಳುತ್ತೀರಾ ?

Sri M. P. PATIL.—I am sorry that is not with me.

ಶ್ರೀ ಬಿ. ಎಸ್. ಶೋರಣ್ಣಗೌಡ.—ಈ ಸರ್ವೆನಂಬರ್ ಎಂಟರಲ್ಲಿ ಈವಾಗ ಕುಂಚೆ ದ್ಯಾಮಪ್ಪ ಎನ್ನುವವರು ಜಮೀನನ್ನು ಉತ್ತು ತಮ್ಮ ಸ್ವಾಧೀನದಲ್ಲಿ ಇಟ್ಟು ಕೊಂಡಿದ್ದಾರಲ್ಲವೆ ?

ಶ್ರೀ ಎಂ. ಪಿ. ಪಾಟೀಲ್.—ಅದು ನನಗೆ ಗೊತ್ತಿಲ್ಲ.

ಶ್ರೀ ಟಿ. ಹನುಮಯ್ಯ.—ಎಷ್ಟು ಜಮೀನು ಸರ್ವೆ ನಂಬರು ಎಂಟರಲ್ಲಿದೆ ?

ಅಧ್ಯಕ್ಷರು.—ಆ ಮಾಹಿತಿ ಇಲ್ಲ

ಶ್ರೀ ಟಿ. ಹನುಮಯ್ಯ.—ಸಾಗುವಳಿ ಚೀಟಿ ಕೊಟ್ಟಿಲ್ಲವೇ ?

ಅಧ್ಯಕ್ಷರು.—ಸಾಗುವಳಿ ಮಾಡಿಲ್ಲ.

Repairs to the sluice of Ganjikere tank in Hosadurga Taluk.

Q.—1260. Sri B. S. SHANKARAPPA (Hosadurga).—

Will the Government be pleased to state :—

(*a*) whether they are aware of the fact that water is being wasted for want of necessary repairs to the sluice of the Ganjikere tank in Mattodu hobli, Hosadurga taluk ;

(*b*) whether they are also aware that as result thereof the crops are drying up ;

(*c*) if so, the action taken in this regard ?

A.—Sri H. K. VEERANNA GOWDH (Minister for Public Works).—

(*a*) No.

(*b*) and (*c*) Do not a rise in view of reply to clause (*a*).

ಶ್ರೀ ಬಿ. ಎಸ್. ಶಂಕರಪ್ಪ.—(*a*)ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಈ ಕೆರೆ ತೂಬಿನಲ್ಲಿ ನೀರು ಹೋಗುವುದಿಲ್ಲ ಎನ್ನುವುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದರ ಕಥೆಯನ್ನೆಲ್ಲಾ ಒಟ್ಟಿಗೆ ಹೇಳಿಬಿಡುತ್ತೇನೆ. ಈ ಕೆರೆಗೆ ಎರಡು ತೂಬುಗಳಿವೆ, 7 ಮತ್ತು 20ನೆಯ ಗ್ರೇಡಿನಲ್ಲಿ. ಇದರ ಕೆಪ್ಯಾಸಿಟಿ, 417 ಯೂನಿಟ್. ಬರತಕ್ಕಂಥ ನೀರು 500 ಯೂನಿಟ್. ಕೆರೆ ಕೆಳಗೆ ಇರತಕ್ಕಂಥ ಜಮೀನು 381 ಎಕರೆ. ಇದರಲ್ಲಿ 351 ಎಕರೆ 1950ನೆಯ ಇಸವಿಯಿಂದ ಸಾಗುವಳಿಯಾಗುತ್ತಿದೆ. ಕೆರೆಯ ಎರಡು ತೂಬುಗಳೂ ಚೆನ್ನಾಗಿವೆ. ಇದರ ಹಿಂದಿನ ಕಟ್ಟಡವೂ ಚೆನ್ನಾಗಿದೆ. ಲೀಕೇಜ್ ಆಗುತ್ತಾ ಇಲ್ಲ. 1950ನೆಯ ಇಸವಿಯಲ್ಲಿ ಕೆರೆ ಉಡಾವಣೆ ಮಾಡಬೇಕೆಂದು ಅರ್ಜಿ ಬಂದಿತ್ತು. ಕೆರೆಗೆ ಬರತಕ್ಕಂಥ ನೀರು ಸಾಕಾಗುತ್ತದೆ. 1954ನೆಯ ಇಸವಿಯಲ್ಲಿ ಏಳನೆಯ ಗ್ರೇಡಿನಲ್ಲಿ ತೂಬು ಸ್ವಲ್ಪ ಸರಿದಿತ್ತು. ರಿಪೇರಿಯಾಗಿದೆ. ಈ ಕೆರೆಗೆ ರಿಪೇರಿಯಾಗಿದೆ. ಜಮೀನಿನ ಪೈರು ಒಣಗಿ ಹೋಗಿಲ್ಲ. ರೆವಿಷ್ಟ್ ಯಾವಾಗಲೂ ಕೊಟ್ಟಿಲ್ಲ. ಆದ್ದರಿಂದ ಶ್ರೀ ಶಂಕರಪ್ಪನವರು ಕೇಳತಕ್ಕಂಥ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—1954ನೆಯ ಇಸವಿಯಲ್ಲಿ ಸ್ವಾರ್ ಇನ್ಸ್‌ಪೆಕ್ಷನ್‌ಆಗಿ ತೂಬಿನಲ್ಲಿ ಲೀಕೇಜ್ ಇದೆ ಎಂಬ ವರದಿ ಇದೆಯಲ್ಲವೆ ?

Sri H. K. VEERANNA GOWDH.—It is not seeking information, but it is giving information challenging the answer.

ಶ್ರೀ ಬಿ. ಎಸ್. ಶಂಕರಪ್ಪ.—ಈಗ ನೀರು ಲೀಕ್ ಆಗುತ್ತಾ ಇಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ನಿಜವಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಮಗೆ ಯಾವ ಡಿಪಾರ್ಟ್‌ಮೆಂಟಿನಿಂದ ಉತ್ತರ ಬಂದಿದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸಂಬಂಧಪಟ್ಟ ಡಿಪಾರ್ಟ್‌ಮೆಂಟಿನಿಂದ ಬಂದಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಒಬ್ಬ ಸದಸ್ಯರು ಹೇಳಿದಾಗ, ಪರಿಶೀಲನೆ ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—Information ಕೇಳಿದ್ದಕ್ಕೆ, ಉತ್ತರ ಇಲ್ಲ ಎಂದು ಹೇಳಿದೆ. ನೀವು ಕಾಗದ ಬರೆಯಿರಿ, ತನಿಖೆ ಮಾಡುತ್ತೇನೆ. ಇನ್ಸ್‌ಪೆಕ್ಷನ್ ಮಾಡುತ್ತೇನೆ.

ಅಧ್ಯಕ್ಷರು.—ಇಂಫರ್‌ಮೇಷನ್ ದೊರಕಿಸಿಕೊಳ್ಳುವುದಕ್ಕೆ ಮಾತ್ರ ಈ ವೇಳೆ ಇದೆ; ವಿವಾದಗಳನ್ನು ಪರಿಹರಿಸುವುದಕ್ಕಲ್ಲ.

Encroachment on Government Road

Q.—1341. Sri G. N. PUTTANNA (Tumkur).—

Will the Government be pleased to state :—

(*a*) whether it is not a fact that the District Board, Tumkur district, sanctioned a road from Adi Hanumantharaya's Temple originating from Harenahalli-Kallur Road to Goppenhalli and on to Hullekere-Turuvekere Road about five years ago ;

(*b*) whether they are aware that a number of persons have encroached